# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 561
ಮಾನ್ಯ ಸದಸ್ಯರ ಹೆಸರು : ಶ್ರೀ ಬಸನಗೌಡ ಬಾದರ್ಲಿ (ವಿಧಾನ ಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11-03-2025
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಬೆಂಕಿ ಬಿದ್ದು ಅಪಾರ ಪ್ರಮಾಣದ ತ್ಯಾಜ್ಯ ಸುಟ್ಟು ಹೋಗಿದ್ದು ಸುತ್ತಮುತ್ತಲಿನ ಮನೆಗಳಿಗೂ ಬೆಂಕಿ ತಗಲುವ ಸಾಧ್ಯತೆಗಳಿರುವುದರಿಂದ ಜನರು ಭಯಭೀತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ? | ಹೌದು,<br>• ಸಿಂಧನೂರು ನಗರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಅಂದಾಜು 54 ಸಾವಿರ ಟನ್‌ಗಳಷ್ಟು ಸಂಗ್ರಹಗೊಂಡಿರುವ ಪಾರಂಪರಿಕ (ಹಳೆಯ) ತ್ಯಾಜ್ಯಕ್ಕೆ, ಬೇಸಿಗೆ ಹಿನ್ನಲೆಯಲ್ಲಿ ಅತಿಯಾದ ಬಿಸಿಲಿನ ಧಗೆಯಿಂದ ದಿನಾಂಕ: 15-02-2025 ರಂದು ಆಕಸ್ಮಿಕವಾಗಿ ಅಗ್ನಿ ಅವಘಡ ಸಂಭವಿಸಿರುತ್ತದೆ. ಆಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನಗರಸಭೆ ಸಿಬ್ಬಂದಿಗಳ ಸಹಾಯದಿಂದ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸಲು ಕ್ರಮ ವಹಿಸಲಾಗಿರುತ್ತದೆ.<br><br>• ಘನತ್ಯಾಜ್ಯ ವಿಲೇವಾರಿ ಘಟಕದ ಹತ್ತಿರ / ಸುತ್ತಮುತ್ತ ಯಾವುದೇ ಜನವಸತಿ ಪ್ರದೇಶಗಳು ಇರುವುದಿಲ್ಲ, ಹಾಗಾಗಿ ಸುತ್ತಮುತ್ತಲಿನ ಮನೆಗಳಿಗೆ ಬೆಂಕಿ ತಗಲುವ ಸಂಭವ ಇರುವುದಿಲ್ಲ. |
| ಆ) | ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಭಜಿಸದ ಹಿನ್ನಲೆಯಲ್ಲಿ ಬೆಂಕಿಯಿಂದಾಗಿ ಸುತ್ತಮುತ್ತಲಿನ ಪರಿಸರವು ಮಲೀನವಾಗುತ್ತಿರುವುದರಿಂದ ಶುದ್ಧ ಗಾಳಿಯ ಗುಣಮಟ್ಟವು ಕುಸಿತವಾಗಿ ಇದರಿಂದ ಇಲ್ಲಿನ ನಿವಾಸಿಗಳು ಹೊಗೆ ಮತ್ತು ವಾಸನೆಯಿಂದ ಜನರು ಮತ್ತು ಜಾನುವಾರುಗಳು ಅನಾರೋಗ್ಯದಿಂದ ಬಳಲುತ್ತಿದ್ದು ಇದಕ್ಕೆ ಕಾರಣರಾದವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | • ಭಾರತ ಸರ್ಕಾರವು ಜಾರಿಗೆ ತಂದಿರುವ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳನ್ವಯ ಸಿಂಧನೂರು ನಗರಸಭೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಉತ್ಪತಿಯಾಗುವ ಪೌರ ಘನತ್ಯಾಜ್ಯ ವಸ್ತುಗಳನ್ನು ಹಸಿಕಸ ಹಾಗೂ ಒಣಕಸವನ್ನಾಗಿ ವಿಂಗಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿಯಲ್ಲಿ ಕ್ರಮ ವಹಿಸಲಾಗಿದೆ.<br>• ಸದರಿ ಘನತ್ಯಾಜ್ಯ ವಿಲೇವಾರಿ ಘಟಕದಿಂದ ಸಾರ್ವಜನಿಕರಿಗೆ ಮತ್ತು ಜಾನುವಾರುಗಳಿಗೆ ಅನಾರೋಗ್ಯದ ಸಮಸ್ಯೆ ಉಂಟಾಗಿರುವ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.<br>• ಮುಂದಿನ ದಿನಗಳಲ್ಲಿ ಈ ರೀತಿಯ ಅಗ್ನಿ ಅವಘಡಗಳು ಸಂಭವಿಸದಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ |

ಇ) ಸಿಂಧನೂರು ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಐದು ವರ್ಷದಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು; ಖರ್ಚಾಗಿರುವ ಅನುದಾನವೆಷ್ಟು: (ವಿವರ ನೀಡುವುದು)

- ಸಿಂಧನೂರು ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಕಳೆದ ಐದು ವರ್ಷದಲ್ಲಿ(2019ರಿಂದ 2024ರವರೆಗೆ) ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಹಾಗೂ ಖರ್ಚಾದ ಅನುದಾನದ ವಿವರ ಈ ಕೆಳಕಂಡಂತಿದೆ;

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಬಿಡುಗಡೆ | ಖರ್ಚು |
|---|---|---|---|
| 1 | 2019-20 | 58.41 | 58.41 |
| 2 | 2020-21 | 0.00 | 0.00 |
| 3 | 2021-22 | 0.00 | 0.00 |
| 4 | 2022-23 | 132.90 | 44.00 |
| 5 | 2023-24 | 0.00 | 0.00 |

ಈ) ಈ ನಗರಸಭೆಯ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಎಷ್ಟು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರುಗಳಲ್ಲಿ ಸರ್ಕಾರದಿಂದ ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹಾಗೂ ಹೊರಗುತ್ತಿಗೆಯಿಂದ ನೇಮಕಗೊಂಡಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ಮಾಹಿತಿಯನ್ನು ಒದಗಿಸುವುದು)

- ನಗರಸಭೆಯ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪ್ರಸ್ತುತ 10 ಜನ ಕಾರ್ಮಿಕರು ಜೊತೆಗೆ 2 ಜನ ಕಾವಲುಗಾರರು ಸೇರಿ ಒಟ್ಟು 12 ಜನ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

- ಸಿಂಧನೂರು ನಗರಸಭೆಗೆ ಒಟ್ಟು 126 ಪೌರಕಾರ್ಮಿಕರ ಹುದ್ದೆಗಳು ಮಂಜೂರಾಗಿದ್ದು ಅದರಲ್ಲಿ 59 ರಷ್ಟು ಪೌರಕಾರ್ಮಿಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು ಇನ್ನು 67 ಪೌರಕಾರ್ಮಿಕರ ಹುದ್ದೆಗಳು ಖಾಲಿ ಇರುತ್ತವೆ.

- ಸಿಂಧನೂರು ನಗರಸಭೆಯಲ್ಲಿ ಪ್ರತಿದಿನ ಉತ್ಪತ್ತಿಯಾಗುವ ತ್ಯಾಜ್ಯದ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಒಟ್ಟು 63 ಜನ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ;

| ಕ್ರ. ಸಂ | ಸಿಬ್ಬಂದಿಗಳು | ಸಂಖ್ಯೆ |
|---|---|---|
| 1 | ವಾಹನ ಚಾಲಕರು | 22 |
| 2 | ಸೂಪರ್‌ವೈಸರ್ | 5 |
| 3 | ಕಾವಲುಗಾರರು | 2 |
| 4 | ಆಟೋಟಿಪ್ಪರ್ ಹೆಲ್ಪರ್ ಗಳು | 12 |
| 5 | ಲೋಡರ್ ಗಳು | 12 |
| 6 | ಕಂಪೋಸ್ಟ್ ಯಾರ್ಡ್ ವರ್ಕರ್ ಗಳು | 7 |
| 7 | ಕ್ಲೀನರ್ ಗಳು | 3 |
| | **ಒಟ್ಟು** | **63** |

(ಕಡತ ಸಂಖ್ಯೆ: ನಅಇ 58 ಸಿಎಸ್‌ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು